# ಜಯ ಮಂಗಳಂ ನಿತ್ಯ ಶುಭ ಮಂಗಳಂ

(This is also listed under - ("mangaLam jaya mangaLam")

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
4. **Note:** Lyrics given without highlights are as per Ref. 2. Wordings in Ref. 1 are same as in Ref. 2 except few differences which are given in green highlights. The wordings in Ref. 3 are also same as in Ref. 2 except few differences which are marked in yellow highlights.
5. **Note:** Singer has followed the lyrics as in Ref. 3.

ರಾಗ: ಭೈರವಿ ತಾಳ: ಛಾಪು (ಅಟ್ಟ)

ಜಯ ಮಂಗಳಂ ನಿತ್ಯ ಶುಭ ಮಂಗಳಂ ॥ ಪ ॥
(ಮಂಗಳಂ ಜಯ ಮಂಗಳಂ)

ಇಂದೀವರಾಕ್ಷಗೆ ಇಭರಾಜ ವರದಗೆ
ಇಂದಿರಾ ರಮಣ ಗೋವಿಂದ ಹರಿಗೆ
ನಂದನ ಕಂದಗೆ ನವನೀತ ಚೋರಗೆ
ವೃಂದಾರಕೇಂದ್ರ ಉಡುಪಿಯ ಕೃಷ್ಣಗೆ ॥ 1 ॥

ಕ್ಷೀರಾಬ್ಧಿವಾಸಗೆ ಕ್ಷಿತಿಜನ ಪಾಲಗೆ
(ಮಾರನ ಪಿತಗೆ) (ಮಾರನನು ಪಡೆದ) (ಮಾರನ್ನ ಪಡೆದ) ಮಂಗಳ ಮೂರ್ತಿಗೆ
ಚಾರು ಚರಣದಿಂದ ಚೆಲುವ ಗಂಗೆಯ ಪಡೆದ
ಕಾರುಣ್ಯ ಮೂರ್ತಿ (ಕೌಸ್ತುಭಧಾರಗೆ) (ಕೌಸ್ತುಭಧಾರಿಗೆ) ॥ 2 ॥

ವ್ಯಾಸಾವತಾರಗೆ ವೇದ ಉದ್ಧಾರಗೆ
ವಾಸಿತಾನಂತಪದ ಸಕಲೇಶಗೆ
ವಾಸುದೇವ ಮೂರ್ತಿ ಪುರಂದರ ವಿಠಲಗೆ
ದಾಸರಾ ಕಾಯ್ವ ರುಕ್ಮಿಣೀ ರಮಣಗೆ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಇಂದೀವರಾಕ್ಷ –** ತಾವರೆಯಂತೆ ಕಣ್ಣುಳ್ಳವ.

**ಇಭರಾಜ ವರದ –** ಮೊರೆಹೊಕ್ಕ ಆನೆಯನ್ನು ಕಾಪಾಡಿದವ (ಗಜೇಂದ್ರ ಮೋಕ್ಷ).

**ವೃಂದಾರ ಕೇಂದ್ರ –** ದೇವತೆಗಳ ಒಡೆಯ.

**ವೃಂದಾರಕ** = ದೇವತೆ

**ಕ್ಷೀರಾಬ್ಧಿ ವಾಸ –** ಪಾಲ್ಗಡಲ ಮೇಲೆ ಮಲಗಿರುವವ.

**ಕ್ಷಿತಿಜನ ಪಾಲ** = ಲೋಕ ಸಂರಕ್ಷಕ

**ಮಾರನ ಪಿತ –** ಮನ್ಮಥನ ತಂದೆ.

**ವ್ಯಾಸವತಾರ** = ವ್ಯಾಸರು ವಿಷ್ಣುವಿನ ಅಂಶರೂಪದಿಂದ ಅವತಾರ ತಾಳಿದವರೆಂದು ಉಲ್ಲೇಖವಿದೆ (ಮತ್ಸ್ಯ ೫೨ / ೩ - ೧೧)

> ಇವರು ವೇದಗಳನ್ನು ವ್ಯವಸ್ಥಿತ ರೂಪದಲ್ಲಿ ವಿಭಾಗಿಸಿದುದರಿಂದ ಇವರಿಗೆ ವೇದವ್ಯಾಸರೆಂಬ ಹೆಸರಿದೆ. ಇವರ ತಂದೆ ಪರಾಶರ ಮುನಿ. ತಾಯಿ ಸತ್ಯವತಿ. ಇವರು ಮಹಾಭಾರತ, ಭಾಗವತ, ಹರಿವಂಶ ಪುರಾಣಗಳ ಕರ್ತರು. ಇವಲ್ಲದೆ ಹದಿನೆಂಟು ಪುರಾಣಗಳನ್ನು ಇವರೇ ಬರೆದವರೆಂದು ಪರಂಪರೆ ಹೇಳುತ್ತದೆ.

**ವಾಸಿತ + ಅನಂತಪದ** = ವೈಕುಂಠದಲ್ಲಿ ವಾಸ ಮಾಡುವವ

**ವಾಸಿತಾನಂತ ಪದ –** ಕೊರೆಯಿಲ್ಲದ ವೈಕುಂಠದಲ್ಲಿ ಇರುವವ; ವಿಷ್ಣುವಿನ ಮೂರು ನೆಲೆಗಳು, ವೈಕುಂಠ, ಶ್ವೇತದ್ವೀಪ ಮತ್ತು ಅನಂತಾಸನ ಎಂದೂ ಇದೆ.

**Classification:** Keerthane
**Ankita:** purandara vittala

**Location:** Udupi, Karnataka

**Category:** Mangala Song, Vishnu Stuti.

**Sub-Category:** Vishnu, Krishna, benne, kalla, govinda, mangala, veda, vaikunta, Rukmini, gange, jaya, Samudra,

**Pravachana:** NA

**Explanation:** NA